O.S.No.:222/2014
P.W.:2

ಈ ದಿನ ದಿಃ02.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ.ಎಸ್.ಆರ್ ವಕೀಲರಿಂದಃ-**

ಪ್ರತಿವಾದಿಯ ತಾತ ದೊಡ್ಡಕುನ್ನೇಗೌಡನಿಗೆ ಮೂರು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೂರು ಜನರ ಹೆಸರು ಭದ್ರೇಗಿರಿಗೌಡ, ಬಾಳೇಗೌಡ ಮತ್ತು ವೀರಭದ್ರೇಗೌಡ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ವೀರಭದ್ರೇಗೌಡ ಎಂದರೆ ಸರಿ. ದಿ.08.07.1962 ರಂದು ರಾಮ, ಚೂಡಯ್ಯ, ಶಿವಣ್ಣ, ರಾಮಚಂದ್ರ ಇವರ ಪರವಾಗಿ ಅವರ ತಂದೆ ಚೂಡಲಿಂಗೇಗೌಡ ಉಃ ಶಿವಣ್ಣ ಇವರು ಬಾಳೇಗೌಡ, ಭದ್ರಗಿರಿಗೌಡ ಮತ್ತು ವೀರಭದ್ರೇಗೌಡ ರವರಿಗೆ ಸರ್ವೆ ನಂ.72/3 ರಲ್ಲಿ 29 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಮತ್ತು ಸ್ವಾಧೀನತೆಯನ್ನು ಬಿಟ್ಟುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. 1965 ರಲ್ಲಿ ಬಾಳೇಗೌಡ, ಭದ್ರಗಿರಿಗೌಡ ಮತ್ತು ವೀರಭದ್ರೇಗೌಡ ರವರುಗಳು ಮೌಖಿಕವಾಗಿ ವಿಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿಯು ಪ್ರತಿವಾದಿಯ ತಂದೆ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಈಗಲೂ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ನಾನು ಇರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿ ಮತ್ತು ಅವರ ತಂದೆ ಅವಿದ್ಯಾವಂತರಾಗಿದ್ದರಿಂದ ಸದರಿ ಖರೀದಿ ಪತ್ರದ ಆಧಾರದ ಮೇಲೆ ತಮ್ಮ ಹೆಸರಿಗೆ ಪಹಣಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿಯವರು ಖರೀದಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ದಿ.10.06.1960 ರಂದು ದಾವಾಸ್ತಿಯನ್ನು ನನ್ನ ತಂದೆ ವೀರಭದ್ರೇಗೌಡ ಮತ್ತು ನನ್ನ ಚಿಕ್ಕಪ್ಪ ಮಾರೇಗೌಡ ಚೂಡಲಿಂಗೇಗೌಡ ಉಃ ಶಿವಣ್ಣನಿಗೆ ಮಾರಾಟ ಮಾಡಿದ್ದರು ಮತ್ತು ಸ್ವಾಧೀನತೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಭೋಗ್ಯದ ಸಾಲ ತೀರಿಸಲು ನನ್ನ ತಂದೆ ದಾವಾಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

ದಾವಾಸ್ತಿಯ ಪೂರ್ವಕ್ಕೆ ಚೂಡೇಗೌಡರ ಜಮೀನು ಎಂದರೆ ಸಾಕ್ಷಿಯು ಎಂ.ಚೂಡೇಗೌಡ ರವರ ಜಮೀನು ಎಂದು ನುಡಿಯುತ್ತಾರೆ. ಚೂಡೇಗೌಡ ತೀರಿಕೊಂಡ ನಂತರ ಆತನ ಮಗ ಚೂಡಲಿಂಗೇಗೌಡ ಸ್ವಾಧೀನದಲ್ಲಿ ಇರುತ್ತಾನೆ. ದಾವಾಸ್ತಿಯ ಪಶ್ಚಿಮಕ್ಕೆ ಮೊದಲು ಗೋಮಾಳ ಜಮೀನು ಇತ್ತು ಎಂದರೆ ಸಾಕ್ಷಿಯು ಈಗಲೂ ಗೋಮಾಳ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಗೋಮಾಳ ಹುಚ್ಚಿರೇಗೌಡನಿಗೆ ಮಂಜೂರಾಗಿರುತ್ತದೆ, ಆದರೆ ಕ್ಷೇತ್ರ ಗೊತ್ತಿಲ್ಲ. ದಾವಾಸ್ತಿಯ ಉತ್ತರಕ್ಕೆ ಸರ್ವೆ ನಂ.72/2 ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.72/2 ನನ್ನ ತಾತ ಕಾಡೇಗೌಡ ರವರಿಗೆ ಸೇರಿದ ಜಮೀನು ಎಂದರೆ ಸರಿ. ಸರ್ವೆ ನಂ.72/2 ಪ್ರತಿವಾದಿ ಖರೀದಿಸಿರುತ್ತಾರೆ ಮತ್ತು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ದಾವಾಸ್ತಿಯ ದಕ್ಷಿಣಕ್ಕೆ ಚೂಡೇಗೌಡ ರವರ ಮಗ ಕೃಷ್ಣ ಇವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ದಾವಾಸ್ತಿಯ ಪೂರ್ವಕ್ಕೆ ಬಾಳಪ್ಪ, ಕುನ್ನೇಗೌಡ ಎಂದು ತಪ್ಪು ಚಕ್ಕುಬಂದಿಯನ್ನು ನಮೂದಿಸಿರುತ್ತೇನೆಂದರೆ ಸರಿಯಲ್ಲ. ಪಶ್ಚಿಮಕ್ಕೆ ಹುಚ್ಚಿರೇಗೌಡ ರವರ ಜಮೀನು ಇದ್ದರು ಸಹ ಗೋಮಾಳ ಎಂದು ಸುಳ್ಳು ಚಕ್ಕುಬಂದಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. ಉತ್ತರ ಮತ್ತು ದಕ್ಷಿಣಕ್ಕೆ ಹೊನ್ನ ಉಃ ವೀರಭದ್ರ ಮತ್ತು ಚೂಡೇಗೌಡ ಎಂದು ಸುಳ್ಳು ಚಕ್ಕುಬಂದಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಯ ಸ್ವಾಧೀನದಲ್ಲಿ ನಾನು ಇರದೆ ಇರುವುದರಿಂದ ಚಕ್ಕುಬಂದಿಯನ್ನು ನಾನು ಸುಳ್ಳಾಗಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. ನಾನು ಎಂದಿಗೂ ದಾವಾಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ

ಸರಿಯಲ್ಲ. ನನ್ನ ಹೆಸರಿನಲ್ಲಿ ದಾವಾಸ್ತಿಯ ಪಹಣಿ ಬರುತ್ತಿದ್ದುದ್ದರ ದುರುಪಯೋಗ ಪಡೆದು ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ ದಾವಾಸ್ತಿಯನ್ನು ಮಾರಾಟ ಮಾಡಿದ್ದರಿಂದ ನನಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಿ.08.07.1962 ಮತ್ತು 10.06.1960 ರ ಕ್ರಯಪತ್ರಗಳನ್ನು ಪ್ರಶ್ನಿಸಿರುತ್ತೇವೆ. ಸಾಕ್ಷಿಯನ್ನು ಎಲ್ಲಿ ಪ್ರಶ್ನಿಸಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯ ತಹಶೀಲ್ದಾರ್ ರವರ ಪ್ರಶ್ನಿಸಿದ್ದು, ಅವರು ಪರಿಶೀಲಿಸಿ ನನ್ನ ತಾತನ ಹೆಸರಿಗೆ ಇದ್ದುದ್ದನ್ನು ನನ್ನ ತಾಯಿಯ ಹೆಸರಿಗೆ ಖಾತೆ ಬದಲಾಯಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರಿಗೆ ಆದ ಖಾತೆಯನ್ನು ಪ್ರತಿವಾದಿ ಆರ್.ಎ.ಎಲ್.ಕೆ.ಪಿ ನಂ.96/2016-17 ರಲ್ಲಿ ಪ್ರಶ್ನಿಸಿರುತ್ತಾರೆಂದರೆ ಸರಿ.

6-7 ವರ್ಷಗಳ ಹಿಂದೆ ಪ್ರತಿವಾದಿ ನಮ್ಮ ಸ್ವಾಧೀನಕ್ಕೆ ತಕರಾರು ಮಾಡಿರುತ್ತಾರೆ, ಆದರೆ ನಿಖರವಾದ ದಿನಾಂಕ ತಿಂಗಳು ವರ್ಷ ಹೇಳಲು ಬರುವುದಿಲ್ಲ. ಸದರಿ ತಕರಾರು ಕುರಿತು ನಾನು ದೂರನ್ನು ನೀಡಿದ್ದು, ಅವರು ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತಾರೆ. ಸದರಿ ದೂರಿನ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ನಾನು ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ತಕರಾರು ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

O.S.No.:222/2014
P.W.:2